**ದಿನಾಂಕಃ 29-10-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ.ಎಫ್.ಎಂ.ಎಂ.ವಕೀಲರಿಂದಃ**

ನಾನು ಪ್ರೌಢ ಶಾಲಾ ಶಿಕ್ಷಕನಾಗಿ ನಿವೃತ್ತಿ ಹೊಂದಿರುತ್ತೇನೆ. ನನಗೆ ಹಿಂದೂ ಲಿಂಗಾಯತ ಸಮಾಜದ ಸಂಪ್ರದಾಯಗಳ ಬಗ್ಗೆ ತಿಳಿದಿರುತ್ತದೆ. ಯಾವುದೇ ವ್ಯವಹಾರ ಮಾಡುವಾಗ ಅಥವಾ ಮದುವೆ ಮಾತುಕತೆ ಮಾಡುವಾಗ ಎರಡು ಕಡೆಯ ಜನರು ಸೇರುತ್ತಾರೆ ಎಂದರೆ ಸರಿ. ಎರಡು ಕಡೆಯ ಹಿರಿಯರು ಒಂದು ನಿರ್ಣಯ ಮಾಡಿ ವ್ಯವಹಾರವನ್ನು ಅಂತಿಮ ಮಾಡುತ್ತಾರೆ ಎಂದರೆ ಸರಿ. ನಾನು ಮದುವೆಯ ಮಾತುಕತೆಗೆ ಹೋಗಿಲಿಲ್ಲ ನನ್ನ ಅಣ್ಣ , ನನ್ನ ಮಾವ, ದೇವೇಂದ್ರಗೌಡ ಮತ್ತು ಹಾಲನಗೌಡ ರವರು

ಮದುವೆ ಮಾತುಕತೆಗೆ ಹೋಗಿದ್ದರು. ಮದುವೆ ಮಾತುಕತೆಯ ಸಮಯದಲ್ಲಿ ಕೊಡು ತೆಗೆದುಕೊಳ್ಳುವ ಬಗ್ಗೆ ಮೆರವಣಿಗೆ ಮಾಡುತ್ತಾರೆ ಎಂದರೆ ಸಾಕ್ಷಿ ನಮ್ಮ ಸಂಪ್ರದಾಯದಲ್ಲಿ ಮಾಡುವುದಿಲ್ಲ ಎಂದು ಹೇಳುತ್ತಾರೆ. ಮದುವೆ ಮಾತುಕತೆ ಆರೋಪಿತರ ಮನೆಯಲ್ಲಿ ಆಗಿರುತ್ತದೆ. ಮದುವೆ ಮಾತುಕತೆಯ ಸಮಯದಲ್ಲಿ ನಾನು ಹಾಜರು ಇರದ ಕಾರಣ ಮಾತುಕತೆಯ ಬಗ್ಗೆ ನನಗೆ ಖುದ್ದಾಗಿ ಮಾಹಿತಿ ಇರುವುದಿಲ್ಲ. ಅವರು ಹೇಳಿದ ನಂತರ ನನಗೆ ಗೊತ್ತಾಗಿರುತ್ತದೆ.

ದಿಃ 18-09-2024 ರಂದು ನಾನು ನ್ಯಾಯಾಲಯದ ಮುಂದೆ ಪ್ರಥಮ ಬಾರಿಗೆ ಆ ವಿಷಯಗಳನ್ನು ಹೇಳಿರುತ್ತೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳನ್ನು ನಾನು ಬೇರೆ ಯಾವುದೇ ಅಧಿಕಾರಿಯ ಮುಂದೆ ಹೇಳಿರುವುದಿಲ್ಲ. ನಾನು ಸುಳ್ಳು ಕಥೆ ಸೃಷ್ಟಿ ಮಾಡಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸಿ.ಹಾಲನಗೌಡ ರವರು ನನ್ನ ಹೆಂಡತಿಯ ಸಾಕು ತಂದೆ ಎಂದು ತೋರಿಸಲು ನಾನು ಪೋಲಿಸರಿಗೆ ಯಾವುದೇ ದಾಖಲೆಯನ್ನು ಕೊಟ್ಟಿರುವುದಿಲ್ಲ. ಈ ವಿಚಾರವನ್ನು ನಾನು ಇದೇ ಪ್ರಥಮ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿ. ಹಾಲನಗೌಡ ರವರು ನಮ್ಮ ಕುಟುಂಬಕ್ಕೆ ಸಂಬಂಧಪಡದ ವ್ಯಕ್ತಿ ಎಂದರೆ ಸರಿಯಲ್ಲ. ಅವರು ಈಗ ಮೃತ ಪಟ್ಟಿರುತ್ತಾರೆ. ನಮ್ಮ ಸಂಪ್ರದಾಯದ ಪ್ರಕಾರ ಒಂದು ತಾಳಿಯನ್ನು ಗಂಡನ ಕಡೆಯವರು ಮತ್ತು ಇನ್ನೊಂದು ತಾಳಿಯನ್ನು ಹೆಣ್ಣಿನ ಕಡೆಯವರು ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಮಾಡಿಸಿ ಕೊಡುತ್ತಾರೆ ಎಂದರೆ ಸರಿ. ತಾಳಿ ಚೈನನ್ನು ನಮ್ಮ ಖುಷಿಯಂತೆ ಕೊಡುತ್ತೇವೆ ಎಂದರೆ ಸರಿ. ನೆಕ್ಲೇಸ್ ನ್ನು ಹೆಣ್ಣುಮಕ್ಕಳು ಧರಿಸುತ್ತಾರೆ ಎಂದರೆ ಸರಿ. ನೆಕ್ಲೇಸ್ ನ್ನು

ಮದುವೆಯಾದ ನಂತರ ಕೊಟ್ಟಿರುತ್ತೇವೆ. 2 ನೇ ಆರೋಪಿಗೆ ಬ್ರಾಸ್ಲೇಟ್ ಕೊಟ್ಟಿರುತ್ತೇವೆ. ನನ್ನ ಮಗಳಿಗೆ ಬಳೆಯನ್ನು ಕೊಟ್ಟಿರುತ್ತೇವೆ. ಅವುಗಳನ್ನು ಕೊಟ್ಟ ಬಗ್ಗೆ ನನ್ನ ಹೆಸರಿನಲ್ಲಿ ದಾಖಲೆ ಇರುವುದಿಲ್ಲ ಎಂದರೆ ಸರಿ. ನಿಪಿ-13 ರಿಂದ 20 ರ ದಾಖಲೆಗಳನ್ನು ಈ ಕೇಸಿಗೊಸ್ಕರ ಸೃಷ್ಟಿ ಮಾಡಿ ಹಾಜರು ಪಡಿಸಿರುತ್ತೇವೆ ಎಂದರೆ ಸರಿಯಲ್ಲ.

2 ನೇ ಆರೋಪಿ ಯಾರ ಸಮಕ್ಷಮವೂ ವರದಕ್ಷಿಣೆ ಕೊಡಿ ಎಂದು ಕೇಳಿಲ್ಲ ಎಂದರೆ ಸರಿಯಲ್ಲ. ವರದಕ್ಷಿಣೆಯ ವಿಚಾರವಾಗಿ ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಭಿನ್ನಾಬಿಪ್ರಾಯ ಬಂದಿರಲಿಲ್ಲ ಎಂದರೆ ಸಾಕ್ಷಿ ನನ್ನ ಮಗಳು ಮದುವೆಯಾಗಿ ಅವರ ಮನೆಗೆ ಹೋದ ನಂತರ ಕಿರುಕುಳ ಕೊಡಲು ಪ್ರಾರಂಭಿಸಿರುತ್ತಾರೆ ಎಂದು ಹೇಳುತ್ತಾರೆ. ಆರೋಪಿತರು ನನ್ನ ಮಗಳಿಗೆ ಯಾವುದೇ ಕಿರುಕುಳ ಕೊಟ್ಟಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ನಮ್ಮ ಮಾತನ್ನು ಕೇಳಬೇಕು ಎಂಬ ಉದ್ದೇಶದಿಂದ ಈ ರೀತಿ ಸುಳ್ಳು ಆರೋಪ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

2015 ರ ಆಗಸ್ಟ ಅಥವಾ ಸೆಪ್ಟೆಂಬರ ತಿಂಗಳಿನಲ್ಲಿ ಪಂಚಾಯಿತಿ ಸೇರಿಸಿದ್ದೇವು. ಪಂಚಾಯಿತಿಯನ್ನು ಆರೋಪಿತರ ಮನೆಯಲ್ಲಿ ಸೇರಿಸಿದ್ದೇವು. ನಮ್ಮ ಕಡೆಯಿಂದ ಪಂಚಾಯಿತಿಗೆ ದೇವೇಂದ್ರಗೌಡರ ಹಾಗೂ ಹೆಚ್.ರುದ್ರಪ್ಪ ರವರನ್ನು ಕರೆದು ಕೊಂಡು ಹೋಗಿದ್ದೇವು. ಅವರು ಹರಪನಹಳ್ಳಿಯವರು ಆಗಿರುತ್ತಾರೆ. ಆರೋಪಿತರ ಕಡೆಯಿಂದ ಜನರು ಸೇರಿದ್ದರು ಆದರೆ ಅವರ ಹೆಸರು ನೆನಪಿರುವುದಿಲ್ಲ. ಆರೋಪಿತರಿಗೆ ತೊಂದರೆ ಕೊಡುವುದಕ್ಕಾಗಿ ವರದಕ್ಷಿಣೆ ವಿಚಾರವಾಗಿ ನನ್ನ ಮಗಳಿಗೆ ಕಿರುಕುಳ ಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿಯ ತಮ್ಮನಾದ 3 ನೇ ಆರೋಪಿಯ ಹೆಸರು ಮಹಂತೇಶ ಆಗಿರುತ್ತದೆ. ಅವರ ಮದುವೆ ಆಗಿರುತ್ತದೆಯೋ

ಅಥವಾ ಇಲ್ಲ ಎಂದು ನನಗೆ ಗೊತ್ತಿರುವುದಿಲ್ಲ. 3 ನೇ ಆರೋಪಿಗೆ 2014 ರಲ್ಲಿ ಮದುವೆಯಾಗಿರುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ನಮ್ಮನ್ನು 3 ನೇ ಆರೋಪಿತನ ಮದುವೆಗೆ ಕರೆದಿರುವುದಿಲ್ಲ. ನನ್ನ ಮಗಳನ್ನು 2 ನೇ ಆರೋಪಿಗೆ ಮದುವೆ ಮಾಡಿಕೊಡುವ ಪೂರ್ವದಲ್ಲಿಯೇ 3 ನೇ ಆರೋಪಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. 1 ನೇ ಆರೋಪಿಯು ಸಹ 3 ನೇ ಆರೋಪಿಯೊಂದಿಗೆ ಬೆಂಗಳೂರಿನಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. 3 ನೇ ಆರೋಪಿ ತನ್ನ ಹೆಂಡತಿ ಜೊತೆ ಬೆಂಗಳೂರಿನಲ್ಲಿ ಅನ್ಯೂನ್ಯವಾಗಿ ವಾಸವಾಗಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ನನ್ನ ಮಗಳು ಮೊದಲನೆಯ ಬಾರಿಗೆ ಆರೋಪಿತರ ಮನೆಗೆ ಬಾಳ್ವೆ ಮಾಡಲು ಹೋದ ನಂತರ ಪುನಃ ಅವರ ಮನೆಗೆ ಬಾಳ್ವೆ ಮಾಡಲು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು ಆರೋಪಿತರ ಮನೆಗೆ ಜೀವನ ನಡೆಸಲು ಹೋಗಿಲ್ಲದ ಕಾರಣ 3 ನೇ ಆರೋಪಿಗೆ ಯಾವಾಗ ಮದುವೆಯಾಗಿತ್ತು ಎಂದು ಗೊತ್ತಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿ ಕೆ.ಇ.ಬಿ ಯಲ್ಲಿ ಕೆಲಸ ಮಾಡುತ್ತಿದ್ದು ಅವನನ್ನು ಕೊಟ್ಟೂರಿಗೆ ವರ್ಗಾವಣೆ ಮಾಡಿಸಿಕೊಂಡು ನಮ್ಮ ಮನೆಯಲ್ಲಿ ವಾಸವಾಗಿರಬೇಕು ಎಂಬ ಇಚ್ಛೆ ನನಗೆ ಇತ್ತು ಎಂದರೆ ಸರಿಯಲ್ಲ. ಅದಕ್ಕೆ 2 ನೇ ಆರೋಪಿ ಒಪ್ಪದೇ ಇದ್ದಾಗ ನನ್ನ ಮಗಳನ್ನು ಅವರ ಮನೆಗೆ ಬಾಳ್ವೆ ಮಾಡಲು ಕಳುಹಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳಿಗೆ ಮಗುವಾದ ನಂತರ ಅವಳನ್ನು ಆರೋಪಿತರ ಮನೆಗೆ ಕಳುಹಿಸಲು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಆ ವಿಚಾರವಾಗಿ ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಮಾತುಕತೆ ನಡೆದಿರುವುದಿಲ್ಲ ಎಂದರೆ

ಸರಿಯಲ್ಲ. ನನಗೆ ಮತ್ತು ನನ್ನ ಮಗಳಿಗೆ ಮನೆ ಬಿಟ್ಟು ಹೋಗದೇ ಇದ್ದರೆ ಗೇಟಿಗೆ ಡಿಕ್ಕಿ ಹೊಡೆಸಿ ಹೆದರಿಸಿ ಓಡಿಸುತ್ತೇನೆ ಎಂದು ಆರೋಪಿತರು ಯಾವತ್ತೂ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು ಆರೋಪಿತರ ಮನೆಯಲ್ಲಿದ್ದಾಗ ನಾನೇ ರೇಶನ್ ತಂದಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇಲ್ಲಿಯವರೆಗೂ ನಾನು ನನ್ನ ಮಗಳನ್ನು ಆರೋಪಿತರ ಮನೆಗೆ ಕಳುಹಿಸುವ ಕೊಡುವ ಬಗ್ಗೆ ಯಾವುದೇ ಪ್ರಯತ್ನ ಮಾಡಿಲ್ಲ ಎಂದರೆ ಸಾಕ್ಷಿ ಕಳುಹಿಸಿ ಕೊಟ್ಟರೆ ನನ್ನ ಮಗಳು ಬದುಕಿ ಉಳಿಯುತ್ತಾಳೆ ಎಂಬ ಯಾವುದೇ ಗ್ಯಾರಂಟಿ ಇಲ್ಲ ಎಂದು ಹೇಳುತ್ತಾರೆ. ಈ ವಿಚಾರವನ್ನು ನಾನೇ ಸೃಷ್ಟಿ ಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಪಿರ್ಯಾದಿ ಕೊಡುವ ಪೂರ್ವದಲ್ಲಿ ನಾವು ಎಲ್ಲಿಯೂ ದೂರನ್ನು ಕೊಟ್ಟಿರುವುದಿಲ್ಲ. ಹರಪನಹಳ್ಳಿ ನ್ಯಾಯಾಲಯದಲ್ಲಿ ಜೀವನಾಂಶ ಕೋರಿ ನನ್ನ ಮಗಳು ಅರ್ಜಿ ಸಲ್ಲಿಸಿರುತ್ತಾಳೆ ಎಂದರೆ ಸರಿ. ಆ ಕೇಸಿನಲ್ಲಿ ನನ್ನ ಮಗಳು ಇಲ್ಲಿಯವರೆಗೂ ಹಾಜರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆ ಕೇಸಿನ ಮುಂದಿನ ಮುದ್ದತ್ತು ಯಾವತ್ತು ಇದೆ ಎಂದು ನನಗೆ ಗೊತ್ತಿರುವುದಿಲ್ಲ. ಈ ಹಿಂದೆ ಯಾವಾಗ ಮುದ್ದತ್ತು ಇತ್ತು ಎಂದು ನನಗೆ ಹೇಳಲಾಗುವುದಿಲ್ಲ. ಈ ಕೇಸಿನಲ್ಲಿ ಸಾಕ್ಷಿ ಹೇಳಲು ಸಮನ್ಸ ಮತ್ತು ವಾರೆಂಟ್ ಬಂದರೂ ನ್ಯಾಯಾಲಯಕ್ಕೆ ಹಾಜರು ಆಗಿರುವುದಿಲ್ಲ ಎಂದರೆ ಸರಿಯಲ್ಲ.

2 ನೇ ಆರೋಪಿಯಿಂದ ಬಾಂಡೆ ಸಾಮಾನುಗಳನ್ನು ವಾಪಸ್ಸು ಕೊಡಿಸಿ ಎಂದು ಮಹಿಳಾ ಮತ್ತು ಶಿಶು ಅಭಿವೃದ್ಧಿ ಇಲಾಖೆ , ಹರಪನಹಳ್ಳಿ ರವರಿಗೆ ನನ್ನ ಮಗಳ ಮೂಲಕ ಅರ್ಜಿ ಕೊಡಿಸಿರುತ್ತೇವೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ಹೇಳುತ್ತಾರೆ. ಬಂಗಾರ , ಬೆಳ್ಳಿ ಸಾಮಾನು , ಮನೆಯ ವಸ್ತುಗಳನ್ನು ವಾಪಸ್ಸು ಕೊಡಿಸಬೇಕು ಎಂದು ನನ್ನ ಮಗಳು ಅರ್ಜಿ ಕೊಟ್ಟಿರುತ್ತಾಳೆ ಎಂದರೆ ಸಾಕ್ಷಿ ಕೊಟ್ಟಿರಬಹುದು ಎಂದು ಹೇಳುತ್ತಾರೆ. ಅಲ್ಲಿ ನಮಗೆ

ಯಾವುದೇ ನ್ಯಾಯ ಸಿಗಲಿಲ್ಲ. ನನ್ನ ಮಗಳು ಮತ್ತು 2 ನೇ ಆರೋಪಿ ಅನ್ಯೂನ್ಯ ಜೀವನ ಮಾಡುವುದೇ ನನಗೆ ಇಷ್ಟ ಇಲ್ಲ ಎಂದರೆ ಸರಿಯಲ್ಲ. 2015 ರಿಂದಲೂ ನಾನು ಮತ್ತು ನನ್ನ ಮಗಳು ಆರೋಪಿತರಿಗೆ ತುಂಬಾ ತೊಂದರೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮಗಳಿಗೆ ಆರೋಪಿತರು ಕಿರುಕುಳ ಕೊಟ್ಟಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡಬೇಕು ಎಂದು ನನ್ನಷ್ಟಕ್ಕೆ ನಾನು ಹುಟ್ಟಿಸಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ಆರೋಪಿತರು ವರದಕ್ಷಿಣೆ ಕಿರುಕುಳ ಕೊಟ್ಟಿದ್ದಾಗಲೀ, ಜೀವ ಬೆದರಿಕೆ ಹಾಕಿದ್ದಾಗಲೀ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.